## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ

ಸಿ.ಸಿ. 226/2017

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಶರತ್ ಕುಮಾರ್ | ಸಿ.ಡಬ್ಲೂಃ **4** |
| ತಂದೆ/ಗಂಡನ ಹೆಸರು | ಃ | ರಾಮಚಂದ್ರಪ್ಪ | ಪಿ.ಡಬ್ಲೂಃ **3** |
| ವಯಸ್ಸು | ಃ | 32 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | ಚಾಲಕ | 24.04.2026 |
| ವಾಸ ಸ್ಥಳ | ಃ | ಜಂಗಮಕೋಟೆ ಗ್ರಾಮ | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ಆರೋಪಿಗಳು ನನಗೆ ಗೊತ್ತು. ಚಾಸಾ-**1** ಗೊತ್ತು.

**2.** ನಾನು ಜಂಗಮಕೋಟೆಯ ಶ್ರಿಕಂಠ ಬೇಕರಿಯಲ್ಲಿ ಸಹಾಯಕನಾಗಿ ಸಂಜೆ ಸಮಯದಲ್ಲಿ ಕೆಲಸ ಮಾಡುತ್ತಿದ್ದೇನೆ. ದಿನಾಂಕ **13.07.2016** ರಂದು ಪೋಲಿಸ್ ಠಾಣೆಯಿಂದ ಶಬ್ಧ ಕೇಳಿ ಬಂತು. ನಂತರ ಆಚೆ ಬಂದು ನೋಡಿದೆ.

**3.** ಸಾಕ್ಷಿಗೆ ನಿಪಿ-**1** ಸ್ಥಳ ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ, ಸಹಿಯನ್ನು ನಿಪಿ-**1**(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನಿಪಿ-**1** ಕ್ಕೆ ಪೋಲಿಸರ ಕೋರಿಕೆಯ ಮೇರೆಗೆ ಬೇಕರಿಯಲ್ಲಿ ಸಹಿ ಮಾಡಿರುತ್ತಾರೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಯಾವುದೇ ಹೇಳಿಕೆಯನ್ನು ಪೋಲಿಸರಿಗೆ ನೀಡಿಲ್ಲ.

(ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ**13.07.2016** ರಂದು ಜಂಗಮಕೋಟೆ ಹೊರ ಪೋಲೀಸ್ ಠಾಣೆ ಮುಂಭಾಗ ಬೆಳಿಗ್ಗೆ **11.00** ರಿಂದ **12.00** ಗಂಟೆ ಸಮಯದಲ್ಲಿ ಚಾ.ಸಾ.**1** ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ-**3** ಮತ್ತು **5** ರವರ ಸಮಕ್ಷಮ ನಿಪಿ-**1** ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-**1** ಕ್ಕೆ

ನಾನು ಸ್ಥಳದಲ್ಲಿ ಹಾಜರಿದ್ದು ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿ.ಪಿ.**1** ರ ಕಾಲಕ್ಕೆ ಈಗ ತೋರಿಸುತ್ತಿರುವ ಪೋಲೀಸ್ ಸಮವಸ್ತ್ರವನ್ನು ಮತ್ತು ಕಲ್ಲನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

**2.** ದಿನಾಂಕಃ**12.07.2016** ರಂದು ರಾತ್ರಿ **09.15** ರ ಸಮಯದಲ್ಲಿ ಜೋರಾಗಿ ಶಬ್ದ ಕೇಳಿ ಬಂದಿದ್ದರಿಂದ ನಾನು ಮತ್ತು ಚಾ.ಸಾ.**3** ರವರು ಹೋಗಿ ನೋಡಿದಾಗ ಆರೋಪಿ ಚಾ.ಸಾ.**1** ರವರಿಗೆ ಏರು ಧ್ವನಿಯಲ್ಲಿ ಮಾತನಾಡಿ, ಅವಾಚ್ಯ ಶಬ್ದಗಳಿಂದ ಬೈಯ್ಯುವುದನ್ನು ನಾನು ನೋಡಿರುತ್ತೇನೆಂದರೆ ಸರಿಯಲ್ಲ. ಅಲ್ಲದೇ ಚಾ.ಸಾ.**1** ರವರಿಗೆ ಆರೋಪಿಗಳು ದಮ್ಮಿ ಹಾಕಿ, ಚಾಸಾ.**1** ರವರು ಧರಿಸಿದ್ದ ಸಮವಸ್ತ್ರದ ಅಂಗಿಯನ್ನು ಹರಿದು ಹಾಕಿ, ಕಲ್ಲಿನಿಂದ ಹೊಡೆದರು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಬಂದ ಚಾ.ಸಾ.**2** ರವರಿಗೆ ಹೊಡೆಯಲು ಹೋದಾಗ ಚಾ.ಸಾ.**6** ರವರು ಅಲ್ಲಿಗೆ ಬಂದಾಗ ಆರೋಪಿ ಓಡಿ ಹೋಗಿರುತ್ತಾನೆಂದರೆ ಸರಿಯಲ್ಲ.

**3.** ಈಗ ಓದಿ ಹೇಳಿದಂತೆ ನಾನು ದಿಃ**20.02.2017** ರಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಹೇಳಿಕೆಯನ್ನು ನೀಡಿಲ್ಲ ಎಂದು ನಿರಾಕರಿಸಿದ ಕಾರಣ ಹೇಳಿಕೆ ಭಾಗವನ್ನು ನಿ.ಪಿ.**2** ಎಂದು ಗುರುತಿಸಲಾಯಿತು. ಈಗ ತೋರಿಸುತ್ತಿರುವ ಮು.ಮಾ-**1** ಸಮವಸ್ತ್ರ ಮತ್ತು ಮು.ಮಾ **-2** ಒಂದು ಕಲ್ಲನ್ನು ನಿ.ಪಿ.**4** ರ ಕಾಲಕ್ಕೆ ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ಚಾಸಾ.**1** ರವರು ಈಗ ತೋರಿಸುತ್ತಿರುವ ಸಮವಸ್ತ್ರವನ್ನು ಗಲಾಟೆ ಸಮಯದಲ್ಲಿ ಧರಿಸಿದ್ದರು ಎಂದರೆ ಸರಿಯಲ್ಲ. ನಾನು ನಿ.ಪಿ.**4** ರಂತೆ ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿದ್ದರು ಸಹ ಆರೋಪಿಗಳು ನಮ್ಮ ಗ್ರಾಮದವರಾದ ಕಾರಣ ಅವರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಇಲ್ಲ ಎನ್ನುತ್ತಾರೆ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.